# ಸಿಕ್ಕಿದನೆಲೆ ಜಾಣೆ ಶ್ರೀ ವೇಣುಗೋಪಾಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 559.
2. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 63.
3. **Note:** Lyrics given without highlights are as per Ref. 1 and the lyrics given in yellow highlights are as per Ref. 2.
4. **Note:** Ankita is different in both the books. We have considered book in Ref.2 as standard and taken that Ankita for listing.

| | |
|---|---|
| ರಾಗ: ಮುಖಾರಿ ತಾಳ: ಅಟ | ರಾಗ: ಎರಕಲ ಕಾಂಭೋದಿ ತಾಳ: ತ್ರಿವಿಡೆ |
| ಸಿಕ್ಕಿದನೆಲೆ ಜಾಣೆ ಶ್ರೀ ವೇಣುಗೋಪಾಲ<br>ಭಕ್ತವತ್ಸಲ ದೇವನು ‖ ಪ ‖ | ಸಿಕ್ಕಿದನೆಲೆ ಜಾಣೆ ಶ್ರೀ ವೇಣುಗೋಪಾಲ<br>ಭಕ್ತವತ್ಸಲ ದೇವನು |
| ಮಕ್ಕಳ ಚಂಡಿಕೆ ಮರದ ಕೊನೆಗೆ ಕಟ್ಟಿ<br>ಘಕ್ಕನೆ ಚಪ್ಪಾಳೆಯಿಕ್ಕಿ ನಲಿವ ನಮ್ಮ ‖ ಅಪ ‖ | ಮಕ್ಕಳ ಚಂಡಿಕೆ ಮರದ ಕೊನೆಗೆ ಕಟ್ಟಿ<br>ಗಕ್ಕನೆ ಕೃಷ್ಣ ಚಪ್ಪಾಳಿಕ್ಕಿದನಮ್ಮ |
| ಹೆಣ್ಣು ಮಕ್ಕಳು ಬಚ್ಚಲೊಳಗೆಣ್ಣೆ ಹಚ್ಚಿಕೊಂಡು<br>ಬಣ್ಣ ವಸ್ತ್ರವ ಬಿಚ್ಚಿ ಬತ್ತಲಿರೆ<br>ಕಣ್ಣಿಗೆ ಬಿಸಿನೀರು ಚೆಲ್ಲಿ ಸೀರೆಯನೊಯ್ದು<br>ಉನ್ನತವಾದ ವೃಕ್ಷವನೇರಿ ಇಹನಮ್ಮ ‖ 1 ‖ | ಹೆಣ್ಣು ಮಕ್ಕಳು ಬಚ್ಚಲೊಳಗೆಣ್ಣೆ ಮಂಡೆಯೊಳು<br>ಬಣ್ಣ ವಸ್ತ್ರವ ಬಿಚ್ಚಿ ಬರಿಮೈಯಲಿರುತಿರೆ<br>ಕಣ್ಣಿಗೆ ಬಿಸಿನೀರ ಚೆಲ್ಲಿ ಸೀರೆಯನೊಯ್ದು<br>ಉನ್ನತವಾದ ವೃಕ್ಷವನೇರಿದನೆ ರಂಗ |
| ಪಟ್ಟೆ ಮಂಚದ ಮೇಲೆ ಪತಿಯಂತೆ ಕುಳ್ಳಿರೆ<br>ಎಷ್ಟು ಸ್ವತಂತ್ರ ಇವಗೆ ಗೋಪಿ<br>ಉಟ್ಟ ಸೀರೆಯನೊಯ್ದು ಬಟ್ಟಕುಚವ ಪಿಡಿವ-<br>ನೆಷ್ಟೆಂದ ಹೇಳೆ ಭ್ರಷ್ಟ ಮಾಡಿದನಮ್ಮ ‖ 2 ‖ | ಪಟ್ಟೆ ಮಂಚದ ಮೇಲೆ ಪತಿಯಂತೆ ಕುಳಿತಿರುವ<br>ಎಷ್ಟು ಸ್ವಾತಂತ್ರ್ಯವೆ ಗೋಪಿ<br>ಉಟ್ಟ ಸೀರೆಯನೆಳೆದು ಬಟ್ಟಕುಚವ ಪಿಡಿದು<br>ಅಷ್ಟು ಮಂದಿಗಳೊಳಗೆ ಗಟ್ಟಿ ಅಪ್ಪಿಕೊಂಡನೆ |
| ಸಡಗರದಿ ಷೋಡಶ ಸಹಸ್ರ ಸ್ತ್ರೀಯರ<br>ಒಡಗೂಡಿ ಕೊಳಲನೂದುತ ಬಂದು<br>ಕಡೆವ ಗೋಪಿಯ ಜಡೆ ಪಿಡಿದೆಳೆವ ಎ-<br>ನ್ನೊಡೆಯ ಗುರು ಪುರಂದರ ವಿಠಲ ರಾಯನೆ ‖ 3 ‖ | ಸಡಗರದಿಂದ ಗೋವಳಿತಿಯರೊಡಗೂಡಿ<br>ನುಡಿಸುತ ಕೊಳಲನು ಪುರದೊಳಗೆ<br>ಕಡೆವ ಮಡದಿಯರ ಕೈ ಪಿಡಿದಾಡುವ<br>ಒಡೆಯನೆ ನಮ್ಮ ಶ್ರೀ ಪುರಂದರ ವಿಠ್ಠಲ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಾಲಕೃಷ್ಣನು ತನ್ನ ಕೈಗೆ ಸಿಕ್ಕಿದನೆಂದು ತುಂಬಾ ಉತ್ಸಾಹದಿಂದ ನೆರೆಯಾಕೆಗೆ ಒಬ್ಬ ಗೋಪಿಕೆ ಹೇಳುತ್ತಿದ್ದಾಳೆ.

**ಮಂಡೆ** = ತಲೆ

**ಬಣ್ಣ ವಸ್ತ್ರ** = ಸೀರೆ

**ಪಟ್ಟೆಮಂಚ** = ಪಟ್ಟೆ ಬಿಗಿದು ಮಾಡಿದ ಮಂಚ

**Classification:** Keerthane
**Ankita:** sri purandara vittala
**Location:** NA
**Category:** Krishna Leele
**Sub-Category:** Krishna, venu, Gopala, deva, makkalu, mara, hennu, kannu, niru, mancha, pati, gopi, kolalu,
**Pravachana:** NA
**Explanation:** NA